## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

## MVC No.1681/2024

**ಸಾಕ್ಷಿಯನ್ನು ದಿಃ 16.08.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

ಪಾಟೀ ಸವಾಲುಃ 1 ಮತ್ತು 2ನೇ ಎದುರುದಾರರ ಪರ ಶ್ರೀ LKJ ವಕೀಲರಿಂದಃ-

ನನ್ನ ತಂದೆಗೆ 72 ವರ್ಷ ವಯಸ್ಸಾಗಿತ್ತು. ನನ್ನ ತಂದೆಗೆ ಅಪಘಾತದ ಸಮಯದಲ್ಲಿ 72 ವರ್ಷ ವಯಸ್ಸಾಗಿತ್ತು ಎಂದು ತೋರಿಸಲು ಆಧಾರ್ ಕಾರ್ಡ್ ಹಾಜರುಪಡಿಸಿದ್ದೇನೆ. ನನ್ನ ತಂದೆಗೆ 80 ವರ್ಷಕ್ಕೂ ಹೆಚ್ಚು ವಯಸ್ಸಾಗಿದ್ದರೂ ಸಹ 72 ವರ್ಷ ವಯಸ್ಸಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ಸ್ಕೂಟರನ್ನು ನನ್ನ ತಂದೆ ಓಡಿಸುತ್ತಿದ್ದರು. ನನ್ನ ತಂದೆಯ ಬಳಿ ದ್ವಿಚಕ್ರ ವಾಹನ ಚಲಾಯಿಸಲು ಡಿ.ಎಲ್ ಇರಲಿಲ್ಲ ಎಂದರೆ ಇತ್ತು. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಹಾಜರುಪಡಿಸಿದ್ದೇನೆ. ನಾನು ನನ್ನ ತಂದೆಯ ಡಿ.ಎಲ್ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 60 ವರ್ಷದ ನಂತರ ಯಾವುದೇ ವ್ಯಕ್ತಿಗೆ ಡಿ.ಎಲ್ ವಿತರಣೆ ಮಾಡುವುದಿಲ್ಲ ಎಂದರೆ ಕಣ್ಣು ಪರೀಕ್ಷೆ ಮಾಡಿ ಡಿ.ಎಲ್ ಕೊಟ್ಟಿದ್ದಾರೆ. ನನ್ನ ತಂದೆಗೆ ಕಣ್ಣು ಪರೀಕ್ಷೆ ಮಾಡಿ ಡಿ.ಎಲ್ ಕೊಡದೇ ಇದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸ್ಥಳವನ್ನು ನಾನು ನೋಡಿಲ್ಲ ಎಂದರೆ 10 ನಿಮಿಷದ ನಂತರ ನೋಡಿದ್ದೇನೆ. ನಾನು ಅಪಘಾತವನ್ನು ಖುದ್ದಾಗಿ ನೋಡಿಲ್ಲ. ಪೋಲಿಸರು ನನ್ನ ಹೇಳಿಕೆ ಪಡೆದಿಲ್ಲ. ನಾನು ಅಪಘಾತದ ಸ್ಥಳವನ್ನು ನೋಡಿಲ್ಲ ಮತ್ತು ಅಲ್ಲಿಗೆ ಭೇಟಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತದ ಸ್ಥಳಕ್ಕೆ ಹೋಗಿದ್ದಲ್ಲಿ ಪೋಲಿಸರು ನನ್ನನ್ನು ವಿಚಾರಣೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅಪಘಾತಕ್ಕೆ ಸಂಬಂಧಿಸಿದಂತೆ ನಮ್ಮ ಕುಟುಂಬದ ಸದಸ್ಯರು ದೂರು ಕೊಟ್ಟಿಲ್ಲ. ಅಪಘಾತದ ಸ್ಥಳಕ್ಕೆ ನಾವು ಯಾರು ಹೋಗದೇ ಇದ್ದ ಕಾರಣ ಹಾಗೂ ಅಪಘಾತ ಹೇಗೆ ಆಯಿತು ಎಂದು ನಮಗೆ ಗೊತ್ತಿಲ್ಲದೇ ಇದ್ದ ಕಾರಣ 3ನೇ ವ್ಯಕ್ತಿಯಿಂದ ದೂರು ಕೊಡಿಸಿದ್ದೇವೆ ಎಂದರೆ 3ನೇ ವ್ಯಕ್ತಿ ದೂರು ಕೊಟ್ಟಿದ್ದರು. ನನ್ನ ತಂದೆಗೆ ವಯಸ್ಸಾಗಿದ್ದ ಕಾರಣ ಅವರು ಚಲಾಯಿಸುತ್ತಿದ್ದ ಸ್ಕೂಟರನ್ನು ನಿಯಂತ್ರಣ ಮಾಡಲಾಗದೇ ಸ್ವತಃ ಬಿದ್ದು ಗಾಯವಾಗಿ ಮೃತಪಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ತಲೆಯ ಎಡಭಾಗಕ್ಕೆ ತೀವ್ರ ಸ್ವರೂಪದ ಪೆಟ್ಟಾಗಿತ್ತು ಎಂದರೆ ಸರಿ.

ಅಪಘಾತವು ಕಲ್ಲುಣಿಕೆಯ ರಂಗನಾಥ ಬಡಾವಣೆಯಲ್ಲಿರುವ ಶನಿದೇವರ ದೇವಸ್ಥಾನಕ್ಕಿಂತ ಸ್ವಲ್ಪ ಮುಂದೆ ಆಗಿದೆ ಎಂದರೆ ಸರಿ. ಅದು ಡಬಲ್ ರೋಡ್ ಎಂದರೆ ಸರಿ. ರಸ್ತೆಯ ಎರಡು ಬದಿಗಳಲ್ಲಿ ಸುಮಾರು ಒಂದುವರೆಯಿಂದ ಎರಡು ಅಡಿಯಷ್ಟು ಅಂತರದ ಫುಟ್ ಪಾತ ಇದೆ ಎಂದರೆ ಸರಿ. ನನ್ನ ತಂದೆ ಸ್ಕೂಟರ್ ನಲ್ಲಿ ಬರುವಾಗ ನಿಯಂತ್ರಣ ತಪ್ಪಿ ರಸ್ತೆಯ ಎಡಭಾಗಕ್ಕೆ ಬಿದ್ದ ಪರಿಣಾಮ ಬದಿಯಲ್ಲಿ ಫುಟ್ಬೋರ್ಡ್ ನನ್ನ ತಂದೆಯ ತಲೆಗೆ ತಾಗಿ

ಅವರ ತಲೆಯ ಎಡಭಾಗಕ್ಕೆ ಏಟಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆ ಹೆಲ್ಮೆಟ್ ಧರಿಸಿದ್ದಲ್ಲಿ ತಲೆಯ ಎಡಭಾಗಕ್ಕೆ ಬಲವಾದ ಏಟು ಆಗುತ್ತಿರಲಿಲ್ಲ ಎಂದರೆ ಹೆಲ್ಮೆಟ್ ಧರಿಸಿದ್ದರು. ನನ್ನ ತಂದೆ ಹೆಲ್ಮೆಟ್ ಧರಿಸದೇ ಇದ್ದ ಕಾರಣವೇ ಅವರ ತಲೆಗೆ ಬಲವಾದ ಏಟಾಗಿ ಅವರು ಮೃತಪಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಮೃತಪಟ್ಟಿದ್ದರೂ ಸಹ ನನ್ನ ತಂದೆ ಹೆಲ್ಮೆಟ್ ಧರಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಎದುರುದಾರರು ಅಪಘಾತವನ್ನು ನೋಡಿ ತನ್ನ ವಾಹನವನ್ನು ನಿಲ್ಲಿಸಿ ಸ್ಥಳಿಯರ ಸಹಾಯದಿಂದ ಬೇರೋಂದು ವಾಹನದಲ್ಲಿ ನನ್ನ ತಂದೆಯನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದ ಎಂದರೆ ವಾಹನ ನಿಲ್ಲಿಸಿದ್ದರು, ಆದರೆ ತಾನೇ ಆಸ್ಪತ್ರೆಗೆ ಕಳುಹಿಸಿಕೊಟ್ಟಿಲ್ಲ. 1ನೇ ಎದುರುದಾರರು ಮಾನವೀಯತೆಯ ದೃಷ್ಟಿಯಿಂದ ನನ್ನ ತಂದೆಯನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2ನೇ ಎದುರುದಾರರ ಲಾರಿಗೆ ವಿಮೆ ಮತ್ತು ಆರ್.ಸಿ ಇದೆ ಎಂದರೆ ಇದೆ ಎಂದು ಪೋಲಿಸರು ಹೇಳಿದ್ದಾರೆ. ಈ ಪ್ರಕರಣದಲ್ಲಿ ಪರಿಹಾರ ಪಡೆಯಲು ಅನುಕೂಲವಾಗಲೀ ಎಂಬ ಕಾರಣಕ್ಕಾಗಿ ದಾಖಲೆಗಳಲ್ಲಿ ಇರುವ ವಿಷಯಗಳನ್ನು ತಿಳಿದುಕೊಂಡು 1 ಮತ್ತು 2ನೇ ಎದುರುದಾರರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ವಯಸ್ಸಾಗಿರುವ ಕಾರಣ ಅರ್ಜಿಯಲ್ಲಿ ಕೇಳಿದಷ್ಟು ಪರಿಹಾರ ಪಡೆಯಲು ನಾವು ಅರ್ಹರಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಅವರ ಸ್ವಯಂಕೃತ ಅಪರಾಧ ದಿಂದ ಮೃತ ಪಟ್ಟಿದ್ದರೂ ಸಹ ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿಯ ವಿರುದ್ಧ ದಾಖಲಾದ ಕ್ರಿಮಿನಲ್ ಪ್ರಕರಣದಲ್ಲಿ ಆತನಿಂದ ಅಪಘಾತವಾಗಿಲ್ಲ ಎಂದು ನ್ಯಾಯಾಲಯ ತೀರ್ಮಾನಿಸಿ ಬಿಡುಗಡೆ ಮಾಡಿದೆ ಎಂದರೆ ಗೊತ್ತಿಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ 3ನೇ ಎದುರುದಾರರ ಪರ ಶ್ರೀ. SJD ಶ್ರೀ.SBS ವಕೀಲರಿಂದಃ

ಕಾಲಾವಕಾಶ ಕೋರಿದ್ದು, ಸೂಕ್ತ ಕಾರಣಗಳನ್ನು ನೀಡದೇ ಇರುವುದರಿಂದ ಕೋರಿಕೆಯನ್ನು ತಳ್ಳಿಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.